ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಈ ವಿಷಯವನ್ನು ಪತ್ರಿಕೆಗಳಲ್ಲಿ ನಾವೂ ನೋಡಿದ್ದೇವೆ. ಆ ತರಹ ಮಾಡುವುದು ಬಹಳ ಹೇಯವಾದ ವಿಚಾರ.

ಶ್ರೀ ವಾಟಾಳ್ ನಾಗರಾಜ್:– ಮಲ್ಟಿ ನ್ಯಾಷನಲ್ ಕಂಪೆನಿಗಳು ಅನ್ಯಾಯ ಮಾಡಿದಾಗ ಏನು ಮಾಡುತ್ತೀರಿ ? ಅಗೌರವ ತೋರಿದಾಗ ಏನು ಮಾಡುತ್ತೀರಿ, ರೈತರ ಕಗ್ಗೊಲೆ ಆದಾಗ ಏನು ಮಾಡುತ್ತೀರಿ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಯಾರೇ ಆಗಲಿ ಕಾನೂನು ಪ್ರಕಾರ ಹೋಗಿ ಕೆಲಸಗಳನ್ನು ಮಾಡಬೇಕು. ಧಾಳಿ ಮಾಡಿ ಹೊಡೆದು ಹಾಕುವುದು...

ಶ್ರೀ ವಾಟಾಳ್ ನಾಗರಾಜ್:– ಅದು ಧಾಳಿ ಏನಲ್ಲ, ಅದೊಂದು ಪ್ರತಿಭಟನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಕರ್ನಾಟಕದ ನಮ್ಮ ರೈತರು ಹಾಗೆ ಮಾಡಿದ್ದಾರೆಂದು ನಾನು ನಂಬೋದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಬೀಜದ ವಿಚಾರದಲ್ಲಿ ಇಡೀ ರೈತ ಸಮುದಾಯಕ್ಕೆ ಬಹುರಾಷ್ಟ್ರೀಯ ಕಂಪೆನಿಗಳಿಂದ ಅನ್ಯಾಯವಾಗಿದೆ, ಇದನ್ನು ನಾವು ಸಹಿಸಿಕೊಂಡಿರಲಿಕ್ಕೆ ಸಾಧ್ಯವೇ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಅದನ್ನು ಹೇಳಿ ಪರಿಶೀಲನೆ ಮಾಡೋಣ, ಕಂಪೆನಿಯವರು ಮಾಡಿದ್ದರಲ್ಲಿ ಅನ್ಯಾಯವಾಗಿದ್ದರೆ ಸರ್ಕಾರ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತದೆ, ಹೀಗೆ ಹೋಗಿ ಧಾಳಿ ಮಾಡುವುದು ಕರ್ನಾಟಕಕ್ಕೆ ಭೂಷಣವಲ್ಲ, ರೈತರ ಹೆಸರನ್ನು ದುರುಪಯೋಗ ಮಾಡಿಕೊಂಡಿದ್ದಾರೆ.

ಡಾ।। ಜೀವರಾಜ್ ಆಳ್ವ:– ಇದು ಬರೀ ಒಂದು ಕಂಪೆನಿ ವಿಚಾರವಲ್ಲ, ನಾವು ಗಮನ ಕೊಡುತ್ತೇವೆಂದು ಹೇಳುವುದಲ್ಲ. ನಿಮ್ಮ ಪೊಲೀಸರು ಆಗ ಏನು ಮಾಡುತ್ತಾ ಇದ್ದರು ? ಎಷ್ಟು ಜನರನ್ನು ಅರೆಸ್ಟ್ ಮಾಡಲಾಯಿತು ? ಯಾವ ಕೇಸ್ ಬುಕ್ ಮಾಡಿದ್ದೀರಿ ? ನಮ್ಮ ರಾಷ್ಟ್ರಧ್ವಜ ಸುಟ್ಟಾಗ ನಮಗೆಷ್ಟು ನೋವಾಗುತ್ತದೆ ? ಇನ್ನೊಂದು ವಾಟಾಳ್ ನಾಗರಾಜರು ಹೇಳಿದ್ದನ್ನು ಒಪ್ಪುತ್ತೇನೆ. ಆದರೆ ಇಲ್ಲಿ ಪ್ರಶ್ನೆ ಅಡಗಿರೋದು ಆ ಕಂಪನಿಯ ಹತ್ತಿರ ಹೋಗಿ ದಾಂಧಲೆ ಮಾಡಿ ರಾಷ್ಟ್ರಧ್ವಜ ಸುಟ್ಟಮೇಲೆ ಅದರ ಫೋಟೋಗ್ರಾಫ್ಸ್ ಪೇಪರ್‌ಗಳಲ್ಲಿ ಬರುತ್ತದೆ. ಈ ವಿಚಾರದಲ್ಲಿ ಸರ್ಕಾರ ನಿಷ್ಕ್ರೀಯತೆ ತೋರಿಸುತ್ತಿದೆ. ನಿಮ್ಮ ಪೊಲೀಸ್ ಎಷ್ಟು ಜನ ಅರೆಸ್ಟ್ ಮಾಡಿದ್ದಾರೆ, ಯಾವ ಕೇಸ್ ಹಾಕಿದ್ದಾರೆ ?

ಶ್ರೀ ವಾಟಾಳ್ ನಾಗರಾಜ್:– ಹಿಂದೇನೆ ದೂರದರ್ಶನಕ್ಕೆ ನುಗ್ಗಿದಾಗಲೇ ಯಾರೂ ಏನೂ ಮಾಡೋಕಾಗಲಿಲ್ಲ, ಇವಾಗ ಏನು ಕತೆ ಹೇಳೋಣ. ಇವರ ಕಾಲದ ಸರ್ಕಾರದಲ್ಲಿ ದೂರದರ್ಶನಕ್ಕೆ ನುಗ್ಗಿದರು, ಅವಾಗ ಯಾರೂ ಕೇಳಲಿಲ್ಲ, ಆದ್ರಿಂದ ಇವೆಲ್ಲ ನಡೆದಿದೆ. ಪ್ರತಿಭಟನೆ ಒಂದಲ್ಲ ಒಂದು ರೀತಿ ನಡೆಯುತ್ತೆ.

SRI HARNALLI RAMASWAMY:– Please do not assume that the Government has not taken any action. The Government and Police have taken action. I will give the details if you so desire.

ಉಪಾಧ್ಯಕ್ಷಿಣಿಯವರು:– ಈಗ ರಾಜುಗೌಡರು

6. <u>ಮೈಸೂರು ವಸ್ತು ಪ್ರದರ್ಶನದ ಆನೆ ಸವಾರಿಯಲ್ಲಿ ದುರಂತ.</u>

ಶ್ರೀ ಜಿ. ರಾಜುಗೌಡ:– ಮೈಸೂರು ವಸ್ತುಪ್ರದರ್ಶನದಲ್ಲಿ ಆನೆ ಮೇಲೆ ಸವಾರಿ ಮಾಡುವಾಗ

ಮಾವುತನ ಬೇಜವಾಬ್ದಾರಿಯಿಂದ ಆನೆ ಮೇಲೆ ಕುಳಿತ್ತಿದ್ದ ಒಬ್ಬ ಖಾಸಗಿ ಡಾಕ್ಟರು ಕೆಳಕ್ಕೆ ಬಿದ್ದು ಶಾಶ್ವತವಾಗಿ ಎರಡು ಕಣ್ಣು ಕಳೆದುಕೊಂಡಿದ್ದಾರೆ. ಅವರು ಲಕ್ಷಾಂತರ ರೂ. ಖರ್ಚು ಮಾಡಿದರೂ ಕೂಡ ಕಣ್ಣು ಹೋಗಿವೆ. ಸರ್ಕಾರ ಏನಾದರೂ ಪರಿಹಾರ ಕೊಡಬೇಕೆಂದು ಒತ್ತಾಯ ಮಾಡಿದರೂ ಸರ್ಕಾರ ಮೌನವಾಗಿದೆ, ದಯಮಾಡಿ ತಾವು ನಾಳೆ ಇದರ ಬಗ್ಗೆ ಉತ್ತರ ಕೊಡಬೇಕು. ಜಿಲ್ಲಾಧಿಕಾರಿಗಳ ರಿಪೋರ್ಟ್ ಇದೆ, ಮುಖ್ಯ ಕಾರ್ಯದರ್ಶಿಗಳು ತಮಗೆ ಕೊಟ್ಟಿದ್ದಾರೆ. ಶಾಶ್ವತವಾಗಿ ಎರಡು ಕಣ್ಣೂ ಹೋಗಿವೆ. 40ವರ್ಷ ವಯಸ್ಸು, ಸಣ್ಣ ಮಕ್ಕಳು, ಮಾನಸಿಕವಾಗಿ ಅವರು ಬಹಳ ವ್ಯಥೆ ಪಡುತ್ತಿದ್ದಾರೆ. ಅದನ್ನು ತರಿಸಿನೋಡಿ. ಮಾವುತನ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಈ ರೀತಿ ಆಗಿದೆ. ಅವನು ಶಾಶ್ವತವಾಗಿ ಕಣ್ಣು ಕಳೆದುಕೊಂಡಿದ್ದಾನೆ. ಮಾವುತ ಸರಿಯಾಗಿ ನೋಡಿಕೊಂಡಿದ್ದರೆ ಜಾಲಿ ರೈಡ್ ಮಾಡುತ್ತಿದ್ದವರು ಕೆಳಗಡೆ ಬೀಳುತ್ತಿರಲಿಲ್ಲ. ದಯಮಾಡಿ ಇದರ ಬಗ್ಗೆ ಗಮನಹರಿಸಿ ಸರಿಯಾದ ಪರಿಹಾರ ಒದಗಿಸಿಕೊಡಬೇಕು ಮತ್ತು ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ ಕೊಡಬೇಕೆಂದು ತಮ್ಮನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಅದನ್ನು ಪರಿಶೀಲನೆ ಮಾಡೋಣ.

ಉಪಾಧ್ಯಕ್ಷರು:– ಈಗ ಚುನಾವಣಾ ಪ್ರಸ್ತಾವಗಳು. ಮಾನ್ಯ ಮುಖ್ಯಮಂತ್ರಿಗಳು.

<u>ಚುನಾವಣಾ ಪ್ರಸ್ತಾವಗಳು</u>

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ):– ಮಾನ್ಯ ಉಪಾಧ್ಯಕ್ಷಿಣಿಯವರೇ, "1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21 (1) (14) ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಹಾಗೂ ಕುವೆಂಪು ವಿಶ್ವವಿದ್ಯಾನಿಲಯಗಳ ಸೆನೆಟ್‌ಗಳಿಗೆ ತಲಾ ಐದು ಜನ ಸದಸ್ಯರನ್ನು ಚುನಾಯಿಸಬೇಕು ಎಂದು ಸೂಚಿಸುತ್ತೇನೆ."

ಉಪಾಧ್ಯಕ್ಷರು:– ಪ್ರಸ್ತಾವನೆಯನ್ನು ಸಭೆಯ ಮುಂದೆ ಇಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಉಪಾಧ್ಯಕ್ಷಿಣಿಯವರೇ, ನಿನ್ನೆ ದಿವಸ....

<u>ದೂರದರ್ಶನದವರಿಂದ ಸದನದ ಕಾರ್ಯಕಲಾಪಗಳನ್ನು ಬಿತ್ತರಿಸುವಲ್ಲಿ ತಾರತಮ್ಯ</u>

ಶ್ರೀ ಸಿ. ಬೈರೇಗೌಡ:– ತಾವು ನನಗೆ ಆಮೇಲೆ ಎಂದು ಮೊದಲೇ ಹೇಳಿದ್ದೀರಿ. ನಿನ್ನೆ ದಿವಸ ತಮ್ಮ ಗಮನಕ್ಕೆ ತಂದಿರತಕ್ಕಂಥ ವಿಚಾರ ಏನೆಂದರೆ ಈ ಸದನದಲ್ಲಿ ಈ ಸುದ್ದಿ ಮಾಧ್ಯಮಗಳು ಈ ಸದನ ಮತ್ತು ತಮ್ಮ ಅಪ್ಪಣೆಯ ಮೇರೆಗೆ ಬಂದು ಇಲ್ಲಿ ಕುಳಿತು ಇಲ್ಲಿ ನಡೆಯತಕ್ಕಂಥ ನಡವಳಿಕೆಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸತಕ್ಕಂಥದ್ದು ಒಂದು ವ್ಯವಸ್ಥೆ ಇದೆ. ನಾವೆಲ್ಲರೂ ಈ ಸದನದಲ್ಲಿ ಆ ಕಡೆ ಕುಳಿತಿರತಕ್ಕಂಥವರಾಗಲಿ, ಈ ಕಡೆ ಕುಳಿತಿರತಕ್ಕಂಥವರಾಗಲಿ, ಯಾರೇ ಆಗಲಿ ಈ ಮಾಧ್ಯಮದ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೇವೆ. ಅದು ನಮ್ಮ ಸಮಾಜದ, ದೇಶದ ಒಂದು ಅಂಗ ಎನ್ನತಕ್ಕಂಥದ್ದು ನಮ್ಮ ವ್ಯವಸ್ಥೆಯ ಒಂದು ಅಂಗ ಎನ್ನತಕ್ಕಂಥದ್ದನ್ನು ನಾವಂತೂ ಕೂಡ ಮನಗಂಡಿದ್ದೇವೆ. ಆದರೆ . ದುರಾದೃಷ್ಟ ಏನೆಂದರೆ ಈ ಸದನದಲ್ಲಿ ನಡೆಯತಕ್ಕಂಥ ಕಾರ್ಯಕಲಾಪಗಳನ್ನು ವರದಿ ಮಾಡತಕ್ಕಂಥ ಸಂದರ್ಭದಲ್ಲಿ ಅದು ಪ್ರಮುಖವಾಗಿ ಈ ದೂರದರ್ಶನದಲ್ಲಿ ವರದಿ ಮಾಡತಕ್ಕಂಥ ಸಂದರ್ಭದಲ್ಲಿ ತಾರತಮ್ಯವನ್ನು ಎಸಗುತ್ತಿದ್ದಾರೆ. ಈ ವಿಚಾರ ಇಲ್ಲಿ ಪ್ರಥಮವಾಗಿ ಪ್ರಸ್ತಾಪವಾಗುತ್ತಿಲ್ಲ. ಈ ಹಿಂದೆಯೂ ಸಹ ಈ ರೀತಿಯಾದಂಥ ವಿಚಾರಗಳು ಪ್ರಸ್ತಾಪವಾಗಿದೆ. ಹಿಂದೆ ಒಂದು ಸಾರಿ ಮಾನ್ಯ ವಾಟಾಳ್ ನಾಗರಾಜ್‌ರವರ ವಿಚಾರದಲ್ಲಿ